ಮಾರುವ ಗೌಳಿಗಿತ್ತಿಯರು; ಸೈಕಲ್ ಮೂಲಕ ಶಾಲೆಗಳಿಗೆ ಹೋಗಿ ಓದಿನಲ್ಲಿ ಹುಡುಗರನ್ನು ಹಿಂದೆ ಹಾಕಿದ ಬಾಲಿಕೆಯರು. ಹೀಗಾಗಿ ಮಹಿಳಾ ಸ್ವಾತಂತ್ರ್ಯವಾದಿಗಳು, ಮಹಿಳೆಯರಿಂದ ಬೀದಿಘೋಷಣೆ ಕೂಗಿಸುವ ಬದಲು, ತಲಾ ಒಂದೊಂದು ಸೈಕಲ್ ಕೊಡಿಸಿದರೆ ಸಾಕು. ಕುಟುಂಬವು ಹೆಣ್ಣಿನ ಚೈತನ್ಯ ಬಂಧಿಸುವ ಸೆರೆಮನೆಯಾಗಿರುವ ಸಮಾಜಗಳಲ್ಲಿ, ಸೈಕಲ್ಲು – ಸ್ಕೂಟರಿನಂತಹ ವಾಹನಗಳು ವಿಮೋಚನೆಯ ಪ್ರೇರಣೆ ನೀಡುತ್ತವೆ. ಬಹುಶಃ ರಾಜಕೀಯ ಪಕ್ಷಗಳಿಗೆ ಇದರ ಗುಟ್ಟು ಚೆನ್ನಾಗಿ ಗೊತ್ತು. ಎಂತಲೇ ಅವು ಸೈಕಲನ್ನು ಚಿಹ್ನೆಯನ್ನಾಗಿ ಆರಿಸಿಕೊಳ್ಳುತ್ತವೆ; ಸೈಕಲ್‌ಭಾಗ್ಯ ಘೋಷಿಸುತ್ತವೆ. ಅಷ್ಟೇಕೆ, ಬ್ರಿಟಿಷರ ವಿರುದ್ಧ ಹೋರಾಡಿದ ಹೆಚ್ಚಿನವರು ಬೈಸಿಕಲ್ ಸವಾರರಾಗಿದ್ದರು. ಸ್ವತಃ ಗಾಂಧೀಜಿ ಸಬರಮತಿ ಆಶ್ರಮಕ್ಕೆ ಸೈಕಲಿನಲ್ಲಿ ಬರುತ್ತಿದ್ದರು. ಶಿವಮೊಗ್ಗೆಯಲ್ಲಿ ನಾನು ಕಂಡಂತೆ ಗಾಂಧಿಯ ಶಿಷ್ಯರೊಬ್ಬರು, ದೊಡ್ಡ ಸಿರಿವಂತರಾಗಿದ್ದರೂ ಕೊನೆಯ ತನಕ ಸೈಕಲ್ ಮೇಲೆಯೇ ಓಡಾಡುತ್ತಿದ್ದರು. ಈ ವಾಹನಕ್ಕೂ ಸ್ವಾತಂತ್ರ್ಯದ ಭಾವಕ್ಕೂ ಎಂತಹುದೊ ಗೂಢ ನಂಟಿರಬೇಕು. ಸೋನಿಯಾ ಗಾಂಧಿಯವರು, ಸತತವಾಗಿ ಸೋಲುತ್ತಿರುವ ತಮ್ಮ ಪಕ್ಷದ ಮಣಭಾರವನ್ನು ಮಗನ ಹೆಗಲಿಗೆ ವರ್ಗಾಯಿಸಿದ ಮಾರನೆಯ ದಿನವೇ ಗೋವಾಕ್ಕೆ ತೆರಳಿದರು. ಹೋದವರೇ ಕಡಲತೀರದಲ್ಲಿ ಸೈಕಲ್ ಸವಾರಿ ಮಾಡಿದರು. ಸ್ತ್ರೀಸ್ವಾತಂತ್ರ್ಯ ಪ್ರತಿಪಾದಕಿಯಾದ ಬಾನುವಿಗೆ ಈ ಚರಿತ್ರೆಯ ಅರಿವು ಬೇಡವೇ? ಸೈಕಲ್ಲು ಬಡವರ ವಾಹನ ಎಂಬ ಪೂರ್ವಗ್ರಹವನ್ನು ಅವಳಲ್ಲಿ ಯಾರು ತುಂಬಿದರೋ ಏನೋ? ನಮ್ಮ ಬಾಲ್ಯದಲ್ಲಿ ಮದುಮಗನ ಬೆಲೆಯನ್ನು ನಿರ್ಧರಿಸುತ್ತಿದ್ದುದು ವಾಚು ಉಂಗುರ ಸೂಟುಗಳಲ್ಲ, ಹೀರೊ ಸೈಕಲ್ಲು. ನಮ್ಮೂರಲ್ಲಿ ಒಬ್ಬ ಮದುಮಗ, ಪೇಟೆಯಿಂದ ಹೊಸಸೈಕಲ್ ತರುವ ತನಕ ಹಸೆಮಣೆಗೆ ಕೂತಿರಲಿಲ್ಲ. ಆಗೆಲ್ಲ ಮದುಮಗನನ್ನು ಬಿಡದಿಮನೆಯಿಂದ ಚಪ್ಪರಕ್ಕೆ ಕರೆತರಲು ಕುದುರೆ ಸಿಕ್ಕದಿದ್ದರೆ, ಸೈಕಲ್ಲಿನಲ್ಲಿ ಕೂರಿಸಿಕೊಂಡು ಬರುವ ಪದ್ಧತಿಯೂ ಇತ್ತು. ಆಧುನಿಕತೆಯ ಸಂಕೇತವಾಗಿ ಎಷ್ಟೋ ಕ್ಷಿಪ್ರಕ್ರಾಂತಿಗಳಿಗೆ ಕಾರಣವಾದ ಈ ವಾಹನ, ನೋಡೆನೋಡೆ ತನ್ನ ಪ್ರತಿಷ್ಠೆಯ ಶಿಖರದಿಂದ ಪ್ರಪಾತಕ್ಕೆ ಉರುಳಿತು. ಉರುಳಲಿ, ಈ ದುರಂತ ನಾಟಕಕ್ಕೆ ನನ್ನ ಮನೆಯೇ ರಂಗಭೂಮಿ ಆಗಬೇಕಿತ್ತೇ?

ಸೈಕಲ್ ಮನೆಬಿಟ್ಟು ಹೋದರೂ ಮನದಂಗಳದಿಂದ ನಿರ್ಗಮಿಸಲಿಲ್ಲ. ಬಾಳಿನಲ್ಲಿ ಮರೆತುಹೋಗದ ವಿದ್ಯೆಗಳಲ್ಲಿ ಈಜು ಮತ್ತು ಸೈಕಲ್ ಸವಾರಿಯೂ ಸೇರಿವೆ. ವಿಶೇಷವೆಂದರೆ, ಬ್ರಹ್ಮಚರ್ಯ ಗೃಹಸ್ಥಗಳಂತೆ ಸೈಕಲ್ ಕಲಿಕೆಯಲ್ಲೂ ಒಳಪೆಟ್ಲು, ಸೀಟಾರೋಹಣ, ಡಬಲ್ ರೈಡಿಂಗ್ ಇತ್ಯಾದಿ ಆಶ್ರಮಗಳಿವೆ. ಇತರೆ ವಿದ್ಯೆಗಳಲ್ಲಿ ಸುಲಭದಿಂದ ಕ್ಲಿಷ್ಟತೆಯ ಕಡೆಗೆ ಚಲನೆ; ಇಲ್ಲದು ಉಲ್ಟಾ. ಒಳಪೆಟ್ಲಂತೂ ಮಹಾಕಠಿಣ. ಇಡೀ ದೇಹವನ್ನು ವಾಹನದ ಹೊರಗಿಟ್ಟು, ಬಲಗಾಲನ್ನು ತ್ರಿಕೋನಾಕಾರದ ಕಂಬಿಯಲ್ಲಿ ತೂರಿಸಿ ಬಲಪೆಡಲಿಗೆ ಕಳಿಸಿ, ಸೀಟಿನ ಮೇಲೆ ಕೈಯೂರಿ ನಡೆಸಬೇಕು. ಈ ಸವಾರಿಯಲ್ಲಿ ಶಕ್ತಿಗಿಂತ ಮುಖ್ಯವಾದುದು ಬ್ಯಾಲನ್ಸು. ಬಾಳು ಸಮತೋಲನದಲ್ಲಿ ಇರಬೇಕಾದರೆ ಸೈಕಲಿನಂತೆ ಸದಾ ಚಲಿಸುತ್ತ ಇರಬೇಕೆಂದು ಐನ್‌ಸ್ಟೈನ್ ಪ್ರಮೇಯ ಮಂಡಿಸಿದ್ದನು. ಇದು ಬಸವಣ್ಣನವರ ಜಂಗಮಕ್ಕಳಿವಿಲ್ಲ ತತ್ವಕ್ಕೆ ಸಮೀಪವಾದುದು. ಹ್ಯಾಂಡಲುಗಳನ್ನು ಎರಡೂ ಕೈಲಿ ಹಿಡಿದು ಎಡಪಾದವನ್ನು ಒಂದು ಪೆಡಲಿನ ಮೇಲಿಟ್ಟು, ಬಲಗಾಲನ್ನು ಕಾಮನಬಿಲ್ಲಾಕಾರದಲ್ಲಿ ಗಾಳಿಯಲ್ಲಿ ಹಾರಿಸಿ ಇನ್ನೊಂದು ಪೆಡಲಿಗೆ ತಂದು ಕೂರಿಸುವುದು, ತಲುಪುದಾಣ ಬಂದಾಗ ವೇಗ ನಿಧಾನಗೊಳಿಸುತ್ತ ಪೆಡಲಿನ ಮೇಲೆ ಎಲ್ಲ ವಜನು ಹಾಕಿ ಬಲಗಾಲನ್ನು 380 ಡಿಗ್ರಿಯಲ್ಲಿ ಹಾರಿಸುತ್ತ ನೆಲಕ್ಕಿಳಿಯುವುದು, ಒಂದು